ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3268/2023

ಸಿ.ಡಬ್ಲ್ಯೂ -04
ಪಿ.ಡಬ್ಲ್ಯೂ-05

ಸಾಕ್ಷಿದಾರನ ಹೆಸರು :- ಅಫ್ ರೋಜ್ ಪಾಷಾ
ತಂದೆಯ ಹೆಸರು :- ಖೌಸರಪಾಷಾ
ವಯಸ್ಸು :- 31 ವರ್ಷ
ಉದ್ಯೋಗ :- ಕೂಲಿ
ವಾಸ :- ಹುಲಿಯೂರುದುರ್ಗ

**ಸಾಕ್ಷಿಗೆ ದಿಃ 01.06.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಸ್ಥಳ ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2 (ಸಿ) ಎಂದು ಗುರುತಿಸಲಾಯಿತು. 2 ವರ್ಷಗಳ ಹಿಂದೆ 10.30 ರಿಂದ 11 ಗಂಟೆಯ ಸಮಯದಲ್ಲಿ ಸಹಿ ಮಾಡಿದ್ದು ಆ ದಿನ ಚಾಸಾ 3 ಸಹ ಇದ್ದರು. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ನಮ್ಮ ಸಮಕ್ಷಮ ಏನನ್ನು ಜಪ್ತು ಮಾಡಿರುವುದಿಲ್ಲ. ನಕ್ಷೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 3(ಸಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ದಿಃ 09.08.2023 ರಂದು ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಘಟನಾ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ನನ್ನ ಹಾಗೂ ಚಾಸಾ 3 ಅವರ ಸಮಕ್ಷಮ ಮಾಡಿ ಒಂದು ಕೂಡಗೋಲು ಮತ್ತು ಕಲ್ಲನ್ನು ಮುಂದಿನ ತನಿಖೆ ಕುರಿತು ಜಪ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮಹಜರ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.